೫. ಖಾಸಗಿ ಶಾಲೆಗಳ ಶಿಕ್ಷಕರಿಗೆ ಸ್ಟೆಪಿಂಗ್ ಅಪ್ ವೇತನ ನೀಡುವುದು

ಶ್ರೀ ಬಸವರಾಜ್ (ಬ್ರಹ್ಮಾವರ).—ಸನ್ಮಾನ್ಯ ಉಪಾಧ್ಯಕ್ಷೆಯವರೆ, ಕರ್ನಾಟಕ ಸಿವಿಲ್ ಸರ್ವಿಸ್ (ರಿವೈಸ್ಡ್‌ಪೇ) ರೂಲ್ಸ್ ೧೯೮೨ ಸಬ್‌ರೂಲ್ ೬ರ ಪ್ರಕಾರ ಖಾಸಗಿ ಅನುದಾನಿತ ಶಾಲಾ ಶಿಕ್ಷಕರಿಗೆ ಅವರಿಗಿಂತ ಸೇವೆಯಲ್ಲಿ ಕಿರಿಯರಾದ ಶಿಕ್ಷಕರ ವೇತನಕ್ಕೆ ಸಮನಾಗಿ ಏರಿಸಿ, ಸ್ಟೆಪ್‌ಅಪ್ ಸೌಲಭ್ಯ ನೀಡಿ ಪುನರ್‌ನಿಗದಿಗೊಳಿಸುವ ಅವಕಾಶವಿದೆ. ಆದರೆ ಇದನ್ನು ಅನುಷ್ಠಾನಗೊಳಿಸುವಾಗ ಅಂಥ ಖಾಸಗಿ ಶಾಲೆಗಳ ಸಮಗ್ರ ಶಿಕ್ಷಕವರ್ಗವನ್ನು ಗಣನೆಗೆ ತೆಗೆದುಕೊಳ್ಳದೆ ಒಂದೊಂದು ಶಾಲೆಗೆ ಒಂದೊಂದು ನಿಯಮ ಅನುಸರಿಸಲಾಗಿದೆ. ಸ್ಟೆಪ್‌ಅಪ್ ಸೌಲಭ್ಯ ನೀಡಿದ ಸಂದರ್ಭದಲ್ಲಿ ಸಹ ಮಂಜೂರಾತಿ ರದ್ದುಗೊಳಿಸಿ ವೇತನವನ್ನು ಹಿಂದಿನಂತೆ ಪುನರ್‌ನಿಗದಿಗೊಳಿಸಿ ಹೆಚ್ಚುವರಿಯಾಗಿ ಪಡೆದ ವೇತನವನ್ನು ವಿಜಾನೆಗೆ ಕಟ್ಟಲು ಆದೇಶಿಸಲಾಗಿದೆ. ಉಡುಪಿ ತಾಲ್ಲೂಕಿನಲ್ಲಿಯೇ ಇಂತಹ ೩೦ಕ್ಕೂ ಮಿಕ್ಕಿದ ಪ್ರಕರಣಗಳಿರುವುದಾಗಿ ತಿಳಿದು ಬಂದಿದೆ. ನಿಯಮಗಳ ಅನುಷ್ಠಾನದಲ್ಲಿ ಬೇರೆ ಬೇರೆ ಅಧಿಕಾರಿಗಳು ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ರೀತಿಯಲ್ಲಿ ಬೇರೆ ಬೇರೆ ನೌಕರರಿಗೆ ಬೇರೆ ಬೇರೆ ನಿರ್ಧಾರ ತೆಗೆದುಕೊಳ್ಳುತ್ತಿರುವುದು ಶೋಚನೀಯ. ನೀಡಿದ ಸ್ಟೆಪ್ ಆಪ್ ಸೌಲಭ್ಯ ವಜಾ ಮಾಡದಂತೆ, ನೀಡದ ಸಂದರ್ಭಗಳಲ್ಲಿ ಆದಷ್ಟು ಬೇಗ ಆರ್ಹತೆಗನುಸಾರ ನೀಡುವಂತೆ ಕ್ರಮವಹಿಸಲು ಒತ್ತಾಯಿಸುತ್ತೇನೆ.

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು).— ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಶಿಕ್ಷಣ ಸಚಿವರ ಪರವಾಗಿ ಈ ಹೇಳಿಕೆಯನ್ನು ಕೊಡಬಯಸುತ್ತೇನೆ.

ಕರ್ನಾಟಕ ಸಿವಿಲ್ ಸರ್ವಿಸ್ (ಪರಿಷ್ಕೃತ) ರೂಲ್ಸ್ ೧೯೮೭ರ ನಿಯಮ ೮ ಉಪ ನಿಯಮ ೬ರ ಪ್ರಕಾರ ನೌಕರರ ವೇತನವನ್ನು ನಿಗದಿಪಡಿಸುವಾಗ ಕಿರಿಯ ನೌಕರರ ವೇತನ ಜಾಸ್ತಿಯಾಗಿದ್ದು ಹಿರಿಯ ನೌಕರರ ವೇತನ ಕಡಿಮೆಯಾಗಿದ್ದ ಪಕ್ಷದಲ್ಲಿ ಅಂತಹ ಹಿರಿಯ ನೌಕರರ ವೇತನವನ್ನು ದಿನಾಂಕ ೧-೧-೮೬ರ ವೇತನ ಶ್ರೇಣಿಯಲ್ಲಿ ಸ್ಟೆಪ್ ಆಪ್ ಮಾಡಿ ನಿಗದಿ ಪಡಿಸಲು ಅವಕಾಶವಿದೆ. ಈ ನಿಯಮ ಎಲ್ಲಾ ಅನುದಾನಿತ ಖಾಸಗಿ ಶಾಲೆಯ ಶಿಕ್ಷಕರಿಗೆ ಅನ್ವಯಿಸುವ ಬಗ್ಗೆ ಸುತ್ತೋಲೆಯನ್ನು ಸಾರ್ವಜನಿಕ ಶಿಕ್ಷಣ ಆಯುಕ್ತರು ಸುತ್ತೋಲೆ ಸಂಖ್ಯೆ ೩೮ (೩) ಇತರೆ ವೇತನ ನಿಗದಿ ಜಿಸಿ ೮೮-೮೯, ದಿನಾಂಕ ೭-೮-೮೯ರಂದು ಎಲ್ಲಾ ಸಹ ನಿರ್ದೇಶಕರು ಹಾಗೂ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರುಗಳಿಗೂ ಕಳುಹಿಸಲಾಗಿದೆ.

ಉಡುಪಿ ತಾಲ್ಲೂಕಿನಲ್ಲಿ ಕೆಲವೊಂದು ಶಿಕ್ಷಕರಿಗೆ ಸ್ಟೆಪ್ ಸೌಲಭ್ಯ ಕೊಡುವಾಗ ಬೇರೆ ಬೇರೆ ರೀತಿಯಲ್ಲಿ ಕೊಟ್ಟಿರುವ ಬಗ್ಗೆ ಯಾವ ಮಾಹಿತಿಯೂ ಸರ್ಕಾರಕ್ಕೆ ಬಂದಿಲ್ಲ. ಸರ್ಕಾರದ ಆದೇಶವನ್ನು ಅನುದಾನಿತ ಖಾಸಗೀ ಶಾಲೆಯ ಶಿಕ್ಷಕರಿಗೂ ಅನ್ವಯಿಸುವ ಬಗ್ಗೆ ತೊಂದರೆಯಾಗಿದ್ದ ಪಕ್ಷದಲ್ಲಿ ಮಂಗಳೂರು ಉಪ ನಿರ್ದೇಶಕರಿಗೂ ಸೂಕ್ತ ನಿರ್ದೇಶನ ಕೊಟ್ಟು ಸರಿಪಡಿಸಲು ತಿಳಿಸಲಾಗುವುದು.

೬. ಉಲ್ಲಾಳ ಕ್ಷೇತ್ರದ ಬೆಂಗ್ರೆಯಲ್ಲಿ ಮನೆಗಳಿಗೆ ಲೈಸನ್ಸ್‌ಕೊಡುವುದು ಹಾಗೂ ಮನೆ ತೆರಿಗೆಯನ್ನು ಕಡಿಮೆ ಮಾಡುವುದು;

ಶ್ರೀ ಬಿ. ಎಂ. ಇದಿನಬ್ಬ (ಉಲ್ಲಾಳ).—ಸನ್ಮಾನ್ಯ ಉಪಾಧ್ಯಕ್ಷೆಯವರೆ, ಉಲ್ಲಾಳ ಕ್ಷೇತ್ರದ ಬೆಂಗ್ರೆಯಲ್ಲಿ ಬಡವರಾದ ಮೀನುಗಾರರು ಮತ್ತು ಬಡವರಾದ ಅಲ್ಪ ಸಂಖ್ಯಾತ ವರ್ಗದವರು ವಾಸ ಮಾಡಿಕೊಂಡು ಬಂದಿರುತ್ತಾರೆ. ಮೀನು ಹಿಡಿದು ರಾತ್ರಿ ಹಗಲು ಬಿಸಿಲು ಮಳೆಯೆನ್ನದೆ ದುಡಿಯುತ್ತಿರುವ ಇವರಿಗೆ ಅನೇಕ ಕಷ್ಟಗಳು ಸಂಭವಿಸುತ್ತವೆ. ಕುದ್ರೋಳಿ ಬೆಂಗ್ರೆಯಿಂದ ಬೆಂಗ್ರೆವರೆಗೆ ಸುಮಾರು ೩೦೦ ಮನೆಗಳ ಜನರಿಗೆ ಇನ್ನೂ ಬಂದರು ಅಧಿಕಾರಿಗಳಿಂದ ಲೈಸೆನ್ಸ್ ಸಿಕ್ಕಿಲ್ಲ. ಸುಮಾರು ೨೦ ವರ್ಷಗಳಿಂದ ಮನೆ ಕಟ್ಟಿ ಕುಳಿತುಕೊಂಡ ಇವರಿಗೆ ಲೈಸೆನ್ಸ್ ಸಿಕ್ಕದೆ ಇರುವುದರಿಂದ ಭಾರಿ ಕಷ್ಟ ಒದಗಿದೆ. ಆಗಾಗ ಅಧಿಕಾರಿಗಳು ಈ ಮನೆಯವರನ್ನು ಬೆದರಿಸುವುದು ಮನೆಗೆ ಹಾನಿ ಮಾಡುವುದು ನಡೆಯುತ್ತಿದೆ. ಆದಲ್ಲದೆ ಬೆಂಗ್ರೆಯಲ್ಲಿರುವ ಮನೆಯವರಿಗೆ ಮೊದಲಿಗಿಂತ ೧೦ ಪಾಲು ಹೆಚ್ಚಿಗೆ ಮನೆ ತೆರಿಗೆ ಹೊರಿಸಿರುತ್ತಾರೆ. ಇದನ್ನು ಕಡಿಮೆ ಮಾಡಲು ಅಲ್ಲಿನ ನಿವಾಸಿಗಳು ಮನವಿ ಮಾಡಿಕೊಂಡಿರುತ್ತಾರೆ. ಆದಕಾರಣ ಬೆಂಗ್ರೆಯಲ್ಲಿ ಲೈಸೆನ್ಸ್ ಕೊಡದ ಎಲ್ಲಾ ಮನೆಗಳಿಗೂ ಲೈಸೆನ್ಸ್ ಕೊಡಿಸಬೇಕು. ೧೦ ಪಾಲು ಜಾಸ್ತಿ ಮಾಡಿದ ತೆರಿಗೆಯನ್ನು ಅತೀ ಕಡಿಮೆ ಮಾಡಬೇಕು. ಈ ಕುರಿತು ಮೀನುಗಾರಿಕಾ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು).—ಅಧ್ಯಕ್ಷರೆ, ಮೀನುಗಾರಿಕೆ ಸಚಿವರ ಗಮನಕ್ಕೆ ತಂದು ಉತ್ತರ ಕೊಡುತ್ತೇನೆ.

(ಮಾನ್ಯ ಅಧ್ಯಕ್ಷರು (ಶ್ರೀ ಎಸ್.ಎಂ.ಕೃಷ್ಣ) ಪೀಠದಲ್ಲಿದ್ದರು)